

# ಅವತಾರ ಪುರುಷನ ಈ ಪರಿ...

**ಸಿಂಪಲ್ ಸುನಿ ನಿರ್ದೇಶನದ, ಶರಣ್ ಮತ್ತು ಆಶಿಕಾ ರಂಗನಾಥ್ ಅಭಿನಯದ 'ಅವತಾರ ಪುರುಷ' ಡಿ. 10ಕ್ಕೆ ಬಿಡುಗಡೆಯಾಗುತ್ತಿದೆ. ಮನರಂಜನೆಯ ಪೊಟ್ಟಣವನ್ನೇ ಹಿಡಿದುಕೊಂಡು ಈ ಪುರುಷ ಜನರ ಎದುರು ಬರುತ್ತಿದ್ದಾನೆ.**



■ **ಪದ್ಮನಾಭ ಭಟ್**

ನಾಯಕನಟ – ನಾಯಕಿನಟಿಯರ ಸಿನಿಮಾಗಳು ಬ್ಯಾಕ್ ಟು ಬ್ಯಾಕ್ ಬಿಡುಗಡೆಯಾಗುವುದು ನೋಡಿದ್ದೇವೆ. ಆದರೆ ಈಗ ನಿರ್ದೇಶನ ಸಿಂಪಲ್ ಸುನಿ ಕೂಡ ಅಂಥ ಬ್ಯಾಕ್ ಟು ಬ್ಯಾಕ್'ಗಿರಿ'ಯನ್ನು ಹೊತ್ತುಕೊಂಡಿದ್ದಾರೆ. ನ. 26ಕ್ಕೆ ಅವರ ನಿರ್ದೇಶನದ, ಗಣೇಶ್ ನಟನೆಯ 'ಸಖತ್' ಬಿಡುಗಡೆಯಾಗಿದೆ. ಜನರಿಂದ ಒಳ್ಳೆಯ ಸ್ಪಂದನವೂ ದೊರೆಯುತ್ತಿದೆ. ಈಗ ಡಿ. 10ಕ್ಕೆ ಸುನಿ ಅವರ ಮತ್ತೊಂದು ಸಿನಿಮಾ 'ಅವತಾರ ಪುರುಷ' ಬಿಡುಗಡೆಯಾಗಲು ಸಜ್ಜಾಗಿದೆ.

''ನಾವು 'ಸಖತ್' ಸಿನಿಮಾ ಕೆಲಸ ಶುರುಮಾಡಿದ್ದು 2018ರಲ್ಲಿ. 'ಅವತಾರ ಪುರುಷ' ಶುರುವಾಗಿದ್ದು 2019ರಲ್ಲಿ. ಈ ಎರಡೂ ಸಿನಿಮಾಗಳ ನಡುವೆ ಒಂದು ವರ್ಷದ ಗ್ಯಾಪ್ ಇತ್ತು. ಆದರೆ ಕೊರೊನಾ ಕಾರಣಕ್ಕೆ ಎರಡೂ ಸಿನಿಮಾದ ಕೆಲಸಗಳು ಅರ್ಧಕ್ಕೇ ನಿಂತವು. ಈಗ ಎರಡೂ ಸಿನಿಮಾಗಳು ಸಿದ್ಧಗೊಂಡಿವೆ. ಹಾಗಾಗಿ ಒಂದರ ಹಿಂದೆ ಇನ್ನೊಂದು ಬಿಡುಗಡೆಯಾಗುತ್ತಿವೆ' ಎಂದು ಕಾರಣ ನೀಡುತ್ತಾರೆ ಸುನಿ.

'ಅವತಾರ ಪುರುಷ' ಸಿನಿಮಾವನ್ನು ಅವರು ಮೊದಲು ವೆಬ್‌ಸಿರೀಸ್‌ಗೆ ಎಂದು ಬರೆದಿದ್ದಂತೆ. ಐದು ಎಪಿಸೋಡ್‌ಗಳನ್ನು ಬರೆದು ಮುಗಿಸಿ, ಪುಷ್ಕರ್ ಅವರಿಗೆ ಕಥೆ ಹೇಳಿದಾಗ ಅವರು 'ಸಿನಿಮಾ ಮಾಡೋಣ' ಅಂದರು. ಇದು ವೆಬ್ ಸಿರೀಸ್‌ಗೆ ಬರೆದಿದ್ದು ಎಂದು ಗೊತ್ತಾದ ಮೇಲೆ 'ಎರಡು ಭಾಗಗಳಲ್ಲಿ ಮಾಡೋಣ' ಎಂದು ಒಪ್ಪಿಕೊಂಡರು. ಕಥೆಯ ನಡಿಗೆಯೂ ಇದಕ್ಕೆ ಪೂರಕವಾಗಿಯೇ ಇದ್ದುದರಿಂದ ಸುನಿ ಒಪ್ಪಿಕೊಂಡರು. ನಿರ್ಮಾಪಕ ಪುಷ್ಕರ್ ಮಲ್ಲಿಕಾರ್ಜುನಯ್ಯ ಅವರ ಬಳಿ ಶರಣ್ ಅವರ ಡೇಟ್ಸ್ ಇತ್ತು. ಶರಣ್ ಅವರಿಗೆ ಕಥೆ ತುಂಬ ಇಷ್ಟವಾಯಿತು.

''ಅವತಾರ ಪುರುಷ' ಸಿನಿಮಾ ಶರಣ್ ಅವರ ಅಭಿಮಾನಿಗಳನ್ನೇ ಟಾರ್ಗೆಟ್ ಮಾಡಿರುವ ಸಿನಿಮಾ. ಅವರು ಈ ಸಿನಿಮಾದಲ್ಲಿ ಜ್ಯೂನಿಯರ್ ಆರ್ಟಿಸ್ಟ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದೊಂದು ಕಾಮಿಡಿ, ಫ್ಯಾಮಿಲಿ ಡ್ರಾಮಾ. ಜೊತೆಗೆ ಬ್ಲ್ಯಾಕ್ ಮ್ಯಾಜಿಕ್, ತ್ರಿಶಂಕು ಲೋಕ ಎಲ್ಲವೂ ಇಲ್ಲಿದೆ' ಎನ್ನುವ ಅವರಿಗೆ ಈ ಸಿನಿಮಾವನ್ನು ಜನರು ಸಖತ್ ಎಂಜಾಯ್ ಮಾಡುತ್ತಾರೆ ಎಂಬ ವಿಶ್ವಾಸವಿದೆ.



'ನನ್ನ ಬರವಣಿಗೆ ಮತ್ತು ಶರಣ್ ಅವರ ಅಭಿನಯ ಎರಡೂ ಇಲ್ಲಿ ಚೆನ್ನಾಗಿ ಹೊಂದಿಕೆಯಾಗಿದೆ. ನನ್ನ ಬರವಣಿಗೆ ಶೇ 50 ರಷ್ಟಿದ್ದರೆ, ಶರಣ್ ಅದಕ್ಕೆ ಇನ್ನೂ ಐವತ್ತರಷ್ಟು ಶಕ್ತಿ ತುಂಬಿ ಪಂಚ್ ಮಾಡುತ್ತಾರೆ. ಅವರ ಬಾಡಿ ಲ್ಯಾಂಗ್ವೇಜ್ ಚೆನ್ನಾಗಿದೆ' ಎಂದು ಉತ್ಸಾಹದಿಂದ ಹೇಳುತ್ತಾರೆ ಅವರು.

ಬಿಡುಗಡೆಯ ಖುಷಿಯ ನಡುವೆಯೂ ಅವರು ಎರಡು ಸಿನಿಮಾಗಳ ಸಿದ್ಧತೆಯನ್ನು ಒಟ್ಟೊಟ್ಟಿಗೇ ಮಾಡುವ ಸಂಕಷ್ಟವನ್ನು ನೆನಪಿಸಿಕೊಳ್ಳಲು ಮರೆಯುವುದಿಲ್ಲ.

'ಎರಡೂ ಸಿನಿಮಾಗಳ ಕೆಲಸವನ್ನು ಒಟ್ಟೊಟ್ಟಿಗೆ ಮಾಡುವುದು ನಿರ್ದೇಶಕನಾಗಿ ನನಗೆ ನಿಜಕ್ಕೂ ಸವಾಲಿನದ್ದಾಗಿತ್ತು. ಎಷ್ಟೋ ಸಲ ಆ ಸಿನಿಮಾ ಎಡಿಟರ್‌ಗೆ ಕಳಿಸಬೇಕಾದ ಮೆಸೇಜ್ ಈ ಸಿನಿಮಾ ಎಡಿಟರ್‌ಗೆ ಕಳಿಸಿದ್ದಿದೆ. ಸಖತ್ ಸಿನಿಮಾ ಎಡಿಟ್ ಮಾಡಬೇಕು ಎಂದು ಮನಸ್ಸಲ್ಲಿಟ್ಟುಕೊಂಡು 'ಅವತಾರ ಪುರುಷ' ಸಿನಿಮಾ ಎಡಿಟಿಂಗ್ ನಡೆಯುವ ಸ್ಟುಡಿಯೊಗೆ ಹೋಗಿದ್ದಿದೆ. ಇಂಥ ಹಲವು ಕನ್‌ಫ್ಯೂಷನ್‌ಗಳ ನಡುವೆಯೂ ಒಂದು ಸಿನಿಮಾದ ಕೆಲಸದಲ್ಲಿ ತೊಡಗಿಕೊಂಡ ಮೇಲೆ ಅದರಲ್ಲಿ ಮುಳುಗಿಯೇ ಹೋಗುತ್ತಿದ್ದೆ. ನಿದ್ದೆ ಬಿಟ್ಟು ಕೆಲಸ ಮಾಡಿದ್ದೇನೆ. ಅದರ ನಡುವೆಯೇ, ಸಖತ್ ಸಿನಿಮಾದಲ್ಲಿ 'ಕುರುಡ' ಎಂಬ ಪದ ಬಳಸಿದ್ದಕ್ಕೆ ಆದ ವಿವಾದ, ಮತ್ತೇನೋ ಕೊನೆ ಕ್ಷಣದ ತೊಂದರೆಗಳೆಲ್ಲವೂ ಎದುರಾದವು.